# ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ

## ವಿಜ್ಞಾನ ಸಪ್ತಾಹದ ಅಂಗವಾಗಿ ನಡೆಸುವ ಸ್ಪರ್ಧೆಗಳ ವಿವರ

### ಅ) ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ನಡೆಸುವ ಸ್ಪರ್ಧೆಗಳ ನಿಯಮ ಹಾಗೂ ನಿಬಂಧನೆಗಳು

1. **ವಿಜ್ಞಾನದಲ್ಲಿ ರಸಪ್ರಶ್ನೆ (ವಿಶ್ವ ವಿಜ್ಞಾನ ದಿನದ ಪ್ರಯುಕ್ತ)**
    - **ನಡೆಸುವ ದಿನಾಂಕ : 27.12.2019**
    - **ಫಲಾನುಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು, ಪ್ರತಿ ಮಹಾವಿದ್ಯಾಲಯದಿಂದ ಒಂದು ತಂಡ (ಇಬ್ಬರು ವಿದ್ಯಾರ್ಥಿಗಳು) ಭಾಗವಹಿಸಬಹುದು.
    - ವಿಷಯ: ಸಾಮಾನ್ಯ ವಿಜ್ಞಾನ, ಖಗೋಳ ಹಾಗೂ ಪರಿಸರ ವಿಜ್ಞಾನ
    - ಪ್ರತಿ ತಂಡದ ವಿದ್ಯಾರ್ಥಿಗಳಿಗೆ ಮೊದಲು ಲಿಖಿತ ಪರೀಕ್ಷೆ ನಡೆಸಲಾಗುವುದು. ಈ ಹಂತದಲ್ಲಿ ಆಯ್ಕೆಯಾದ 5 ತಂಡಗಳನ್ನು ಮುಂದಿನ ಹಂತಕ್ಕೆ ಪರಿಗಣಿಸಲಾಗುವುದು.
    - ವಿಜೇತರಾದ ಮೊದಲ ತಂಡಕ್ಕೆ ರೂ. 2,500/– ಎರಡನೇ ತಂಡಕ್ಕೆ ರೂ.1,500/– ಹಾಗೂ ಮೂರನೇ ತಂಡಕ್ಕೆ ರೂ.1,000/– ನಗದು ಬಹುಮಾನ ನೀಡಲಾಗುವುದು.
2. **ಸೆಮಿನಾರ್ (ಶಕ್ತಿ ಸಂರಕ್ಷಣೆ ದಿನದ ಅಂಗವಾಗಿ)**
    - **ನಡೆಸುವ ದಿನಾಂಕ : 28.12.2019**
    - **ಫಲಾನುಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು, ಪ್ರತಿ ಮಹಾವಿದ್ಯಾಲಯದಿಂದ 1 ವಿದ್ಯಾರ್ಥಿ ಭಾಗವಹಿಸಬಹುದು.
    - ವಿಷಯ: ಶಕ್ತಿ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಮಹತ್ವ
    - ಸಮಯ : 5 ನಿಮಿಷಗಳು
    - ವಿದ್ಯಾರ್ಥಿಯು 5 ನಿಮಿಷದ ನಂತರ ಪ್ರಸ್ತುತ ಪಡಿಸಿದ ವಿಷಯದ ಮಾಹಿತಿಯನ್ನು ಬಹುಮಾನಕ್ಕೆ ಪರಿಗಣಿಸಲಾಗುವುದಿಲ್ಲ.
    - ವಿದ್ಯಾರ್ಥಿಗಳು ಅವಶ್ಯಕತೆಯಿದ್ದಲ್ಲಿ ಪಿ.ಪಿ.ಟಿ. ಮತ್ತು ಪೋಸ್ಟರ್‌ಗಳನ್ನು ಬಳಸಿಕೊಳ್ಳಬಹುದು.
    - ಭಾಷೆ : ಕನ್ನಡ
    - ಮೊದಲ ಬಹುಮಾನ ರೂ. 2,500/–, ಎರಡನೇ ಬಹುಮಾನ ರೂ.1,500/– ,ಹಾಗೂ ಮೂರನೇ ಬಹುಮಾನ ರೂ.1,000/– ನಗದು ಬಹುಮಾನ ನೀಡಲಾಗುವುದು.
    - ವಿಭಾಗಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು.
3. **ಗಣಿತ ರಸಪ್ರಶ್ನೆ ಸ್ಪರ್ಧೆ :**
    - **ನಡೆಸುವ ದಿನಾಂಕ : 29.12.2019**
    - **ಫಲಾನಿಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು
    - ವಿಷಯ : ಪದವಿ ಹಂತದ ಗಣಿತ ವಿಷಯ ಹಾಗೂ ಸಾಮಾನ್ಯ ಗಣಿತ
    - ಪ್ರತಿ ಮಹಾವಿದ್ಯಾಲಯದಿಂದ ಒಂದು ತಂಡ (2 ವಿದ್ಯಾರ್ಥಿಗಳು) ಭಾಗವಹಿಸಬಹುದು.
    - ಪ್ರತಿ ತಂಡದ ವಿದ್ಯಾರ್ಥಿಗಳಿಗೆ ಮೊದಲು ಲಿಖಿತ ಪರೀಕ್ಷೆ ನಡೆಸಲಾಗುವುದು. ಈ ಹಂತದಲ್ಲಿ ಆಯ್ಕೆಯಾದ 5 ತಂಡಗಳನ್ನು ಮುಂದಿನ ಹಂತಕ್ಕೆ ಪರಿಗಣಿಸಲಾಗುವುದು.
    - ವಿಜೇತರಾದ ಮೊದಲ ತಂಡಕ್ಕೆ ರೂ. 5,000/– ಎರಡನೇ ತಂಡಕ್ಕೆ ರೂ.4,000/– ಹಾಗೂ ಮೂರನೇ ತಂಡಕ್ಕೆ ರೂ.3,000/– ನಗದು ಬಹುಮಾನ ನೀಡಲಾಗುವುದು.

- ವಿಭಾಗಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು.

**4. ಗಣಿತ ಮಾದರಿ ಸ್ಪರ್ಧೆ ಹಾಗೂ ಪ್ರದರ್ಶನ :**

- **ನಡೆಸುವ ದಿನಾಂಕ : 29.12.2019**
- **ಫಲಾನುಭವಿಗಳು : ಪದವಿ ವಿದ್ಯಾರ್ಥಿಗಳು**
- ವಿಜೇತರಾದ ಮೊದಲ ತಂಡಕ್ಕೆ ರೂ. 5,000/- ಎರಡನೇ ತಂಡಕ್ಕೆ ರೂ.4,000/- ಹಾಗೂ ಮೂರನೇ ತಂಡಕ್ಕೆ ರೂ.3,000/- ನಗದು ಬಹುಮಾನ ನೀಡಲಾಗುವುದು.
- ಪ್ರತಿ ಮಹಾವಿದ್ಯಾಲಯದಿಂದ ಒಂದು ತಂಡ (2 ವಿದ್ಯಾರ್ಥಿಗಳು) ಮಾತ್ರ ಭಾಗವಹಿಸುವುದು.
- ಮಾದರಿಯನ್ನು ಸ್ವತಃ ತಾವೇ ತಯಾರಿಸಿರಬೇಕು.
- ಮಾದರಿಗೆ ತಗಲುವ ವೆಚ್ಚವು ಸಾಧ್ಯವಾದಷ್ಟು ಕಡಿಮೆಯಿರಬೇಕು.
- ಮಾದರಿಯಲ್ಲಿನ ಪರಿಕಲ್ಪನೆ, ಅನ್ವಯಗಳ ವಿವರಣೆ ಮತ್ತು ವೆಚ್ಚದ ವಿವರಣೆ ಮಾಡುವುದು ಅತ್ಯವಶ್ಯಕ. ವಿವರಣೆಗೆ ಕೇವಲ 5 ನಿಮಿಷಗಳನ್ನು ಮಾತ್ರ ಕೊಡಲಾಗುವುದು.
- ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ನಿಯತಾಂಕಗಳು ಈ ರೀತಿಯಾಗಿವೆ.

  ಅ) ಪರಿಕಲ್ಪನೆ – 10 ಅಂಕಗಳು
  ಬ) ನಾವೀನ್ಯತೆ – 10 ಅಂಕಗಳು
  ಕ) ಅನ್ವಯ – 10 ಅಂಕಗಳು
  ಡ) ವಿವರಣೆ – 10 ಅಂಕಗಳು
  ಇ) ಮಾದರಿಯ ಪ್ರಸ್ತುತಿ – 10 ಅಂಕಗಳು
- ವಿಭಾಗಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು.

**5. ಚಿತ್ರಕಲೆ ಸ್ಪರ್ಧೆ :**

- **ನಡೆಸುವ ದಿನಾಂಕ : 30.12.2019**
  - **ಫಲಾನುಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು
- **ಕೇಂದ್ರ ವಿಷಯ :** ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ
  **ಉಪ ವಿಷಯಗಳು :** ಅ) ಸ್ಮಾರ್ಟ ವಿಲೇಜ ಪರಿಕಲ್ಪನೆ
  ಆ) ಸುಸ್ಥಿರ ಕೃಷಿ ಮತ್ತು ಆಹಾರ ಭದ್ರತೆ
  ಇ) ಸಂಪನ್ಮೂಲಗಳ ಪುನರ್ ಬಳಕೆ ಮತ್ತು ಮರು ಬಳಕೆ
  ಈ) ಪರಿಸರ ಸಂರಕ್ಷಣೆ ಸುಸ್ಥಿರ ತಂತ್ರಜ್ಞಾನ
  ಉ) ಸುಸ್ಥಿರ ಸಮೂಹ ಸಾರಿಗೆ
  ಊ) ಹವಾಮಾನ ಬದಲಾವಣೆ ಮತ್ತು ನೈಸರ್ಗಿಕ ವಿಕೋಪಗಳು
- ಡ್ರಾಯಿಂಗ ಶೀಟ ಒದಗಿಸಲಾಗುವುದು.
- ಸ್ಪರ್ಧೆಗಳು ಪೇಟಿಂಗ್‌ಗೆ ಅಗತ್ಯವಾದ ಪರಿಕರಗಳನ್ನು ತರತಕ್ಕದ್ದು.
- ಸಮಯ : 75 ನಿಮಿಷಗಳು, ಪ್ರತಿ ಮಹಾವಿದ್ಯಾಲಯದಿಂದ 2 ವಿದ್ಯಾರ್ಥಿಗಳು ಭಾಗವಹಿಸಬಹುದು
- ತೀರ್ಪು : (100 ಅಂಕಗಳು)
- ಚಿತ್ರಕಲೆ /ಪೇಂಟಿಂಗ್ ನ್ನು ಕೆಳಕಂಡ ಅಂಶಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು.
  ಅ) ಸೃಜನಾತ್ಮಕತೆ ಮತ್ತು ಸ್ವಂತಿಕೆ

ಆ) ಕೇಂದ್ರ ವಿಷಯಕ್ಕೆ ಸಂಬಂಧಿಸಿದ ಕಲಾತ್ಮಕ ಪ್ರಸ್ತುತಿ
ಇ) ಅಚ್ಚುಕಟ್ಟು ಮತ್ತು ಉತ್ತಮ ವಿನ್ಯಾಸ
ಈ) ಸೂಕ್ತವಾಗಿ ಪೇಂಟಿಂಗ್ ಪೂರ್ಣಗೊಳಿಸುವುದು
ಮೇಲ್ಕಂಡ 5 ಅಂಶಗಳಿಗೆ ತಲಾ 20 ಅಂಕಗಳನ್ನು ಮೀಸಲಿಡಲಾಗಿದೆ.

- ವಿಭಾಗ ಮಟ್ಟದಲ್ಲಿ ಆಯ್ಕೆಯಾದ ವಿಜೇತ ವಿದ್ಯಾರ್ಥಿಗಳನ್ನು ರಾಜ್ಯಮಟ್ಟದಲ್ಲಿ ನಡೆಯುವ ಚಿತ್ರಕಲಾ ಸ್ಪರ್ಧೆಗೆ ಕಳುಹಿಸಿಕೊಡಲಾಗುವುದು.
- ಮೊದಲ ಬಹುಮಾನ ರೂ. 5000/-, ಎರಡನೇ ಬಹುಮಾನ ರೂ.4000/- ,ಹಾಗೂ ಮೂರನೇ ಬಹುಮಾನ ರೂ.3000/- ನಗದು ಬಹುಮಾನ ನೀಡಲಾಗುವುದು.

**6. ಪ್ರಬಂಧ ಸ್ಪರ್ಧೆ :**

- **ನಡೆಸುವ ದಿನಾಂಕ : 30.12.2019**
- **ಫಲಾನುಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು
- ಪ್ರಬಂಧ ಸ್ಪರ್ಧೆಯನ್ನು ಕನ್ನಡದಲ್ಲಿ ಆಯೋಜಿಸಲಾಗುವುದು.
- ಆಯಾ ವಿಭಾಗದಡಿ ಬರುವ ಪದವಿ ಮಹಾವಿದ್ಯಾಲಯದಿಂದ ಗರಿಷ್ಠ ಇಬ್ಬರು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.
- **ಪ್ರಬಂಧದ ಕೇಂದ್ರ ವಿಷಯ** : ಬಾಹ್ಯಾಕಾಶದಲ್ಲಿ ಉಳಿದಿರುವ ಕೃತಕ ಉಪಗ್ರಹಗಳ ಅವಶೇಷಗಳು. (ಸ್ಪೇಸ ಜಂಕ್)
- ಪ್ರಬಂಧವನ್ನು 1000 ಪದಗಳಿಗೆ ಮೀರದಂತೆ ಪ್ರಮುಖವಾಗಿ ಮುನ್ನುಡಿ, ವಿಷಯ ಮಂಡನೆ ಮತ್ತು ತೀರ್ಮಾನ
  ಹಾಗೂ ಶಿಫಾರಸ್ಸುಗಳನ್ನೊಳಗೊಂಡಂತೆ ರಚಿಸುವುದು.
- **ಸಮಯ** : 30 ನಿಮಿಷಗಳ ಕಾಲಾವಕಾಶ ನೀಡಲಾಗುವುದು.
- **ಅಂಕಗಳು** : 100

| | | |
|---|---|---|
| ಅ) ವಿಷಯ ಪ್ರಸ್ತುತತೆ | – | 35 |
| ಆ) ಬರವಣಿಗೆಯ ಕೌಶಲ್ಯ | – | 35 |
| ಇ) ವಿಷಯ ಮಂಡನೆ | – | 20 |
| ಈ) ಅಂತಿಮ ತೀರ್ಮಾನ | – | 10 |

- ಮೊದಲ ಬಹುಮಾನ ರೂ. 5000/-, ಎರಡನೇ ಬಹುಮಾನ ರೂ.4000/- ,ಹಾಗೂ ಮೂರನೇ ಬಹುಮಾನ ರೂ.3000/- ನಗದು ಬಹುಮಾನ ನೀಡಲಾಗುವುದು.
- ಪ್ರತಿ ವಿಭಾಗದಿಂದ ಅತ್ಯುತ್ತಮವಾದ 10 ಪದವಿ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗುವುದು.

**7. ನಾಟಕ ಸ್ಪರ್ಧೆ :**

- ನಡೆಸುವ ದಿನಾಂಕ : **31.12.2019**
- **ನಾಟಕ ತಂಡದ ಗಾತ್ರ** : ಒಂದು ತಂಡದಲ್ಲಿ ಗರಿಷ್ಠ 8 ವಿದ್ಯಾರ್ಥಿಗಳು
- **ಮಾರ್ಗದರ್ಶಕರು / ನಿರ್ದೇಶಕರು** : ಒಬ್ಬರು
- **ಫಲಾನುಭವಿಗಳು :** ವಿಜ್ಞಾನ ಪದವಿ ವಿದ್ಯಾರ್ಥಿಗಳು, ಪ್ರತಿ ಮಹಾವಿದ್ಯಾಲಯದಿಂದ **ಗರಿಷ್ಠ** 8 ವಿದ್ಯಾರ್ಥಿಗಳ ಒಂದು ತಂಡ
- ಭಾಷೆ : ಕನ್ನಡ

- **ಸಾಹಿತ್ಯ** : ಈಗಾಗಲೇ ತಮಗೆ ತಿಳಿಸಿದ ಸ್ಪರ್ಧೆಗಳ ವಿವರದಲ್ಲಿ ಕಾಣಿಸಿದ ಯಾವುದಾದರೂ ಒಂದು ಉಪ ವಿಷಯವನ್ನು ಆಯ್ಕೆ ಮಾಡಿಕೊಂಡು ವೈಜ್ಞಾನಿಕ ಸಂದೇಶವನ್ನು ಸಮಾಜಕ್ಕೆ ನೀಡುವಂತಿರಬೇಕು. ನಾಟಕದ ಸಾಹಿತ್ಯವನ್ನು ಆಯೋಜಕರಿಗೆ ಮೊದಲೇ ಕಳುಹಿಸಿ ಅನುಮೋದನೆ ಪಡೆಯುವುದು.
- **ನಿರ್ಮಾಣ** : ನಾಟಕವನ್ನು ವಿದ್ಯಾರ್ಥಿಗಳೇ ರಚಿಸಿ, ಸಾಹಿತ್ಯ ಬರೆದು, ನಿರ್ದೇಶನ ಮಾಡಿ ನಟಿಸಬೇಕು. ಉಪನ್ಯಾಸಕರು ಸಾಹಿತ್ಯ ರಚನೆ ಮತ್ತು ನಿರ್ದೇಶನಕ್ಕೆ ಪೂರ್ವಾಭ್ಯಾಸದ ವೇಳೆ ನೆರವು ನೀಡಬಹುದಾಗಿದೆ.
- **ಅವಧಿ** : ನಾಟಕವನ್ನು 30 ನಿಮಿಷದೊಳಗೆ ಸಂಪೂರ್ಣಗೊಳಿಸಬೇಕಾಗುವುದು.
- **ವಸ್ತ್ರ / ವೇಷ ಭೂಷಣ** : ನಾಟಕದಲ್ಲಿ ವಿಶೇಷ ವಸ್ತ್ರವಿನ್ಯಾಸ, ಬೆಳಕು, ಹಿನ್ನಲೆ ಸಂಗೀತ, ನೃತ್ಯ, ಮೂಕಾಭಿನಯ ಅಥವಾ ಇನ್ನಿತರೆ ಅಗತ್ಯ ಅಂಶಗಳನ್ನು ಅಳವಡಿಸಿಕೊಳ್ಳಬಹುದಾಗಿದ್ದು, ವೈಜ್ಞಾನಿಕ ಸಂದೇಶವನ್ನು ನೀಡುವಂತಿರಬೇಕು. ಆದರೆ, ಅಂತಹ ಅಗತ್ಯವಾದ ಪರಿಕರಗಳನ್ನು ಆಯಾ ತಂಡಗಳೇ ಏರ್ಪಡಿಸಿಕೊಳ್ಳಬೇಕಾಗುತ್ತದೆ.
- **ವೇದಿಕೆಯನ್ನು ಸಜ್ಜುಗೊಳಿಸುವುದು** : ವೇದಿಕೆಯನ್ನು ಆಯಾ ತಂಡಗಳೇ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಗೊಳಿಸಿ, ಅಲಂಕರಿಸುವುದು.
- ಅತ್ಯುತ್ತಮ ನಾಟಕ : ವಿಜೇತರಾದ ಮೊದಲ ತಂಡಕ್ಕೆ ರೂ. 5,000/– ಎರಡನೇ ತಂಡಕ್ಕೆ ರೂ.4,000/– ಹಾಗೂ ಮೂರನೇ ತಂಡಕ್ಕೆ ರೂ.3,000/– ನಗದು ಬಹುಮಾನ ನೀಡಲಾಗುವುದು.
- ಅತ್ಯುತ್ತಮ ನಿರ್ದೇಶನ : ರೂ. 3,000/–
- ಅತ್ಯುತ್ತಮ ಪಾತ್ರಧಾರಿ : ರೂ. 3,000/–
- ಅತ್ಯುತ್ತಮ ಸಾಹಿತ್ಯ : ರೂ. 3,000/–
- ವಿಭಾಗ ಮಟ್ಟದಲ್ಲಿ ಆಯ್ಕೆಯಾದ ವಿಜೇತ ತಂಡಗಳನ್ನು ರಾಜ್ಯಮಟ್ಟದಲ್ಲಿ ನಡೆಯುವ ನಾಟಕ ಸ್ಪರ್ಧೆಗೆ ಕಳಿಸಿಕೊಡಲಾಗುತ್ತದೆ.
- ತೀರ್ಪು : 100 ಅಂಕಗಳು ಪ್ರತಿ ನಾಟಕದ (ಸಾಹಿತ್ಯ, ನಿರ್ದೇಶನ, ತಂಡದ ಪ್ರದರ್ಶನ ಹಾಗೂ ವೈಯಕ್ತಿಕ ಪ್ರದರ್ಶನ ಮೌಲ್ಯ ಮಾಪನವನ್ನು ನುರಿತ ತೀರ್ಪುಗಾರರಿಂದ / ತಜ್ಞರಿಂದ ಮಾಡಿಸಲಾಗುವುದು. ಮೌಲ್ಯಮಾಪನವನ್ನು ಕೆಳಕಂಡ ಅಂಶಗಳ ಆಧಾರದ ಮೇಲೆ ಮಾಡಲಾಗುವುದು.

  ಅ) ವೈಜ್ಞಾನಿಕ ವಿಷಯ – 30 ಅಂಕಗಳು
  ಆ) ಪ್ರಸ್ತುತಿ – 50 ಅಂಕಗಳು
  ಇ) ಪರಿಣಾಮ – 20 ಅಂಕಗಳು

**ಈ ಎಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಚಿಸುವ ವಿದ್ಯಾರ್ಥಿಗಳು ದಿನಾಂಕ 24.12.2019 ರ ಒಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು.**

**ವಿಶೇಷ ಸೂಚನೆ:**

1. ನಾಟಕ ಸ್ಪರ್ಧೆ ಹೊರತು ಪಡಿಸಿ ಉಳಿದ ಎಲ್ಲಾ ಸ್ಪರ್ಧೆಗಳನ್ನು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ನಡೆಸಲಾಗುವುದು ಹಾಗೂ **ನಾಟಕ ಸ್ಪರ್ಧೆಯನ್ನು "ಮಾನಸೋಲ್ಲಾಸ ಸಭಾಂಗಣ", ಹೊಸ ಅತಿಥಿಗೃಹ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ನಡೆಸಲಾಗುವುದು.**
2. ಸ್ಪರ್ಧೆಯ ದಿನದಂದು, ಸ್ಪರ್ಧಿಗಳು ಮುಂಜಾನೆ 10.00 ಗಂಟೆಯ ಒಳಗಾಗಿ ನಿಗದಿತ ಸ್ಥಳದಲ್ಲಿ ಹಾಜರಿರಬೇಕು.
3. ಪ್ರಯಾಣ/ಇತರೆ ಭತ್ಯೆಯನ್ನು ನೀಡಲಾಗುವುದಿಲ್ಲ.
4. ಸ್ಪರ್ಧೆಗಳಿಗೆ ಯಾವುದೆ ನೊಂದಣಿ ಶುಲ್ಕ ಇರುವುದಿಲ್ಲ.
5. ಮಧ್ಯಾಹ್ನ ಲಘು ಊಟದ ವ್ಯವಸ್ಥೆ ಇರುತ್ತದೆ.

6. ಹೆಚ್ಚಿನ ಮಾಹಿತಿಗಾಗಿ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ನೊಂದಾಯಿಸಿಕೊಳ್ಳಬಹುದು ಅಥವಾ drscs.kud@gmail.com ಈ ಮಿಂಚಂಚೆಯ ಮೂಲಕ ಅಥವಾ 9448963494,7204632606, 9611250065 ಈ ಮೊಬೈಲ್ ಸಂಖ್ಯೆಗಳ ವಾಟ್ಸಾಪ್ ಮೂಲಕ ನೊಂದಾಯಿಸಿಕೊಳ್ಳಬಹುದು.